# ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್, ಬೆಳಗಾವಿ ಇವರಿಂದ ಮಕ್ಕಳಿಗಾಗಿ

# ಆನಲೈನ್ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆ

ಈ ಸ್ಪರ್ಧೆಯು ನಗರದ 03 ರಿಂದ 12 ರ ವಯೋಮಾನದ ಮಕ್ಕಳಿಗಾಗಿ ಹಮ್ಮಿಕೊಂಡಿದ್ದು, ಚಿತ್ರಕಲೆ / ವ್ಯಂಗ್ಯ ಚಿತ್ರ / ವರ್ಣಚಿತ್ರ ಹಾಗೂ ನಗರ ಅಭಿವೃದ್ಧಿಯಲ್ಲಿ ಹೊಸ ಆಲೋಚನೆಗಳ ಕುರಿತಾಗಿ ಪ್ರಬಂಧ ಬರೆಯಬಹುದಾಗಿದೆ.

<u>ಸ್ಪರ್ಧೆ ಯಾರಿಗಾಗಿ?</u>

ಬೆಳಗಾವಿ ಸ್ಮಾರ್ಟಸಿಟಿ ಹಮ್ಮಿಕೊಂಡ ಈ ಸ್ಪರ್ಧೆಯು ಮಕ್ಕಳ ಕಲೆ, ಬಾಲ ಕಲಾವಿದರನ್ನು ಪ್ರೋತ್ಸಾಹಿಸುವ ಗುರಿ ಹೊಂದಿದ್ದು, ಮಕ್ಕಳಲ್ಲಿರುವ ಸೃಜನಶೀಲ ಅಭಿವ್ಯಕ್ತಿಗೆ ಒಂದು ವೇದಿಕೆಯನ್ನು ಕಲ್ಪಿಸಿಕೊಡಲು ಪ್ರಯತ್ನಿಸುತ್ತಿದೆ.

<u>ಸ್ಪರ್ಧೆಯ ವಿವರಗಳು:</u> ಮಕ್ಕಳಿಗಾಗಿ ಹಮ್ಮಿಕೊಂಡಿರುವ ಈ ಆನ್‌ಲೈನ್ ಸ್ಪರ್ಧೆಯಲ್ಲಿ ಭಾಗವಹಿಸಲು 10-08-2020 ರಿಂದ ಆಗಸ್ಟ್ 17-08-2020 ರವೆಗೆ ಅವಕಾಶವಿದ್ದು, ವಿವರಗಳಿಗಾಗಿ ಬೆಳಗಾವಿ ಸ್ಮಾರ್ಟಸಿಟಿ ಕಚೇರಿಯ ವೆಬ್‌ಸೈಟ್ www.bscl.in ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ.

ಸ್ಪರ್ಧೆಗೆ ಕೇವಲ ಒಂದು ಚಿತವನ್ನು ಮಾತ್ರ ಕಳುಹಿಸಲು ಅವಕಾಶವಿದ್ದು, ಚಿತ್ರಕಲೆ ಎ-4 ಅಥವಾ ಎ-3 ಹಾಳೆಗೆ ಮೀರುವಂತಿಲ್ಲ. ಮತ್ತು ಪ್ರಬಂಧವು ಎ-4 ಹಾಳೆಯ ಒಂದು ಬದಿಯಲ್ಲಿ ಇರತಕ್ಕದ್ದು ಮತ್ತು ಎರಡು ಹಾಳೆಗೆ ಮೀರುವಂತಿಲ್ಲ.

<u>ಪ್ರಬಂಧ ಬರಹ ಮತ್ತು ಚಿತ್ರಕಲೆಗಾಗಿ ಅಥವಾ ರೇಖಾಚಿತ್ರಕ್ಕಾಗಿ ಯಾವ ಮಾಧ್ಯಮ ಬಳಸಬಹುದು?</u>

ಚಿತ್ರಕಲೆ/ರೇಖಾಚಿತ್ರ/ವ್ಯಂಗ್ಯಚಿತ್ರ ರಚನೆಗೆ ಯಾವುದೇ ಮಾಧ್ಯಮವನ್ನು ಕೂಡ ಬಳಸಬಹುದಾಗಿದೆ. ಸಾಮಾನ್ಯ ಪೆನ್ಸಿಲ್, ಬಣ್ಣದ ಪೆನ್ಸಿಲ್, ಗ್ರಾಫೈಟ್ ಪೆನ್ಸಿಲ್, ಇದ್ದಿಲು, ಸ್ಕೆಚ್ ಪೆನ್ನುಗಳು, ಜಲವರ್ಣಗಳು, ಆಯಿಲ್ ಪೇಂಟಿಂಗ್, ಆಕ್ರಿಲಿಕ್ ಬಣ್ಣಗಳನ್ನು ಬಳಸಬಹುದಾಗಿದೆ. ಚಿತ್ರ ರಚನೆಗೆ ಯಾವುದೇ ವಿಧವಾದ ಪೇಪರ್ ಅಥವಾ ಕ್ಯಾನ್‌ವಾಸ್ ಕೂಡ ಬಳಸಬಹುದಾಗಿದೆ. ಕ್ಯಾನ್‌ವಾಸ ಬಳಸಿದಲ್ಲಿ ನಾಲ್ಕೂ ಬದಿಗಳಲ್ಲಿ 2 ಇಂಚ್ ನಷ್ಟು ಸ್ಥಳವನ್ನು ಖಾಲಿ ಬಿಡುವುದು ಕಡ್ಡಾಯ. ಅಭಿವೃದ್ಧಿಯ ದೃಷ್ಟಿಯಿಂದ ಹೊಸ ಆಲೋಚನೆಗಳ ಕುರಿತಾಗಿ ಏರ್ಪಡಿಸಿದ ಪ್ರಬಂಧ ರಚನೆಗೆ ಮಕ್ಕಳು ಕನ್ನಡ ಅಥವಾ ಇಂಗ್ಲೀಷ ಭಾಷೆಯನ್ನು ಬಳಸಬಹುದಾಗಿದೆ.

<u>ಆನ್‌ಲೈನ್ ಸ್ಪರ್ಧೆಗೆ ಹೆಸರು ನೋಂದಾಯಿಸುವುದು ಹೇಗೆ?</u>

ಸ್ಪರ್ಧೆಯಲ್ಲಿ ಭಾಗಿಯಾಗುವ ಮಕ್ಕಳು ತಮ್ಮ ಸ್ವ-ರಚಿತ ವರ್ಣಚಿತ್ರ/ವ್ಯಂಗ್ಯಚಿತ್ರ/ಚಿತ್ರಕಲೆ ಅಥವಾ ಪ್ರಬಂಧ ಬರಹಗಳನ್ನು ಸ್ಪಷ್ಟವಾಗಿ ಸ್ಕ್ಯಾನ್ ಮಾಡಿ ಹೆಸರು, ವಿಳಾಸ, ವಯಸ್ಸು ಮತ್ತು ಆಧಾರ ಕಾರ್ಡ ಪ್ರತಿಯೊಂದಿಗೆ ಬೆಳಗಾವಿ ಸ್ಮಾರ್ಟಸಿಟಿ ಕಚೇರಿಯ ಇ-ಮೇಲ್ bscltd16@gmail.com ಗೆ ಕಳುಹಿಸಬಹುದಾಗಿದೆ.

ಪ್ರತಿ ವಿಭಾಗದಲ್ಲೂ (ಚಿತ್ರಕಲೆ-ಪ್ರಬಂಧ ರಚನೆ) ಒಬ್ಬ ಮಗು ಒಂದು ಚಿತ್ರ ಕಲೆ ಅಥವಾ ಒಂದು ಪ್ರಬಂಧ ಬರಹವನ್ನು ಸಲ್ಲಿಸಲು ಅವಕಾಶವಿರುತ್ತದೆ. ಇ-ಮೇಲ್ ಮೂಲಕ ಸಲ್ಲಿಕೆಯಾದ ಪ್ರಬಂಧ ಬರಹಗಳಲ್ಲಿ ಮತ್ತು ವರ್ಣಚಿತ್ರಗಳಲ್ಲಿ ಪರಿಶೀಲಿಸಿ ಆಯ್ಕೆಯಾದ ಚಿತ್ರ ಮತ್ತು ಬರಹಗಳನ್ನು ಈ ಕಚೇರಿಯ ಸಾಮಾಜಿಕ ಜಾಲತಾಣ, ಫೇಸ್ಬುಕ್, ವೆಬ್‌ಸೈಟ್ ಹಾಗೂ ಬ್ಲಾಗ್‌ಗಳಲ್ಲಿ ಪ್ರಕಟಿಸಲಾಗುವುದು.

ಸ್ಪರ್ಧೆಯಲ್ಲಿ ಭಾಗಿಯಾದ ಒಟ್ಟು ಸ್ಪರ್ಧಿಗಳಲ್ಲಿ 1ನೇ ಬಹುಮಾನ, 2 ನೇ ಬಹುಮಾನ ಮತ್ತು ಮೂರನೇ ಬಹುಮಾನ ಹೀಗೆ ಪ್ರತಿ ವಿಭಾಗದಲ್ಲೂ ಮೂರು ಮಕ್ಕಳನ್ನು ಆಯ್ಕೆ ಮಾಡಿ ಸೂಕ್ತ ಪ್ರೋತ್ಸಾಹಕರ (ನಗದು ಮತ್ತು ಪ್ರಮಾಣ ಪತ್ರ) ಬಹುಮಾನಗಳನ್ನು ನೀಡಲಾಗುವುದು.

ಮತ್ತೇಕೆ ತಡ, ಆತ್ಮೀಯ ಮಕ್ಕಳೇ ನಿಮ್ಮಲ್ಲಿರುವ ಪ್ರತಿಭೆಯನ್ನು ಹೊರಹಾಕಲು ಇದೋ ನಿಮಗಾಗಿ ಸೂಕ್ತ ವೇದಿಕೆ. ಈಗಲೇ ನಿಮ್ಮ ಚಿತ್ರಕಲೆ / ಪ್ರಬಂಧ ಬರಹಗಳನ್ನು bscltd16@gmail.com ಗೆ ಇ-ಮೇಲ್ ಮಾಡಿ.

ಕರಡು ಪ್ರತಿಯನ್ನು ಮಾನ್ಯ ವ್ಯ.ನಿ. ರವರಿಂದ
ಅನುಮೋದಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು
ಬೆಳಗಾವಿ ಸ್ಮಾರ್ಟಸಿಟಿ ಲಿಮಿಟೆಡ್

Scanned with CamScanner